(iv) ಚಿಕ್ಕಬಳ್ಳಾಪುರದ ಬೊಮ್ಮನಹಳ್ಳಿಯಲ್ಲಿ ಯುಗಾದಿ ಹಬ್ಬದ ದಿವಸ ಕೆಲವು ಮನೆಗಳು ಸುಟ್ಟು ಹೋಗಿದ್ದು ಅವರಿಗೆ ಸೂಕ್ತ ಪರಿಹಾರವನ್ನು ನೀಡುವ ಬಗ್ಗೆ.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರದ, ಮೆಂಡಿಕಲ್ ಹೋಬಳಿ, ಬೊಮ್ಮನಹಳ್ಳಿಯಲ್ಲಿ ತಾರೀಖು ೨–೪–೮೪ ರಂದು ಯುಗಾದಿ ಹಬ್ಬದ ದಿವಸ ಬೆಂಕಿ ಹತ್ತಿಕೊಂಡಾಗ ೬ ಮನೆಗಳು ಸುಟ್ಟು ಹೋಗಿದೆ, ಇನ್ನು ಬೆಂಕಿ ಹಬ್ಬುವ ಸೂಚನೆ ಇದ್ದುದರಿಂದ ಇನ್ನು ೬ ಮನೆಗಳನ್ನು ಕೆತ್ತು ಹಾಕಿದ್ದಾರೆ. ಆ ಜನ ಹಬ್ಬದ ದಿವಸ ಬಹಳ ತೊಂದರೆಪಟ್ಟಿದ್ದಾರೆ. ನಮ್ಮ ತಾಲ್ಲೂಕಿನ ಅಧಿಕಾರಿಗಳಿಗೆ ಅವರಿಗೆ ಏನಾದರೂ ಪರಿಹಾರ ಕೊಡಿ ಎಂದು ಹೇಳಿದರೆ, ಬಡ್ಜೆಟ್ ಇಲ್ಲವೆಂದು ಹೇಳುತ್ತಿದ್ದಾರೆ. ನಾನು ಅವತ್ತಿನ ದಿವಸ ಸಾರ್ವಜನಿಕರಿಂದ ೨ ಮೂಟೆ ಹಸಿ ಹಿಟ್ಟು ಮತ್ತು ಒಂದು ಮೂಟೆ ಅಕ್ಕಿಯನ್ನು ಕಲೆಕ್ಟ್ ಮಾಡಿ ಅವರಿಗೆ ವಿತರಣೆ ಮಾಡಿ ಬಂದಿದ್ದೇನೆ. ಇಂಥಾ ಪರಿಸ್ಥಿತಿಯಲ್ಲಿ ಅದರಲ್ಲೂ ಬೇಕಿ ಅನಾಹುತವಾಗಿ ಅವರು ತೊಂದರೆಗೆ, ಕಷ್ಟಕ್ಕೆ ಸಿಲುಕಿದಾಗ ಒಂದಿಷ್ಟು ಹಣವನ್ನು ಮಾಸಲಾಗಿಡಬೇಕು. ಆ ರೀತಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ವ್ಯವಹಾರಗಳ ಸಚಿವರು).—ರೆವೆನ್ಯೂ ಅಧಿಕಾರಿಗಳಿಗೆ ಹೇಳಿ ರೀಪೋರ್ಟ್ ತರಿಸಿಕೊಂಡು ನೋಡಿ ಯಾರು ಯಾರಿಗೆ ಪರಿಹಾರ ಕೊಡಬಹುದು ಎನ್ನುವುದನ್ನು ನೋಡಿ ತಕ್ಷಣವೇ ಪರಿಹಾರ ಕೊಡುವ ಬಗ್ಗೆ ಆದೇಶ ನೀಡುತ್ತೇನೆ.

ಶ್ರೀ ಎ. ರುಕ್ಮಯ್ಯಪೂಜಾರಿ.—ಮಾನ್ಯ ಅಧ್ಯಕ್ಷರೇ, ಇದೇ ೬ನೇ ತಾರೀಖು ಶುಕ್ರವಾರ ಸಂಜೆ ಸುಮಾರು ೮ ಘಂಟೆ ಸಮಯದಲ್ಲಿ ೬೫ ವರ್ಷದ ಲಕ್ಷ್ಮಮ್ಮ ಎನ್ನುವವರು ತನ್ನ ಸೊಸೆಯನ್ನು ಮಾರ್ಥಾಸ್ ಆಸ್ಪತ್ರೆಯಲ್ಲಿ ಹೆರಿಗೆಗೋಸ್ಕರವಾಗಿ ಸೇರಿಸಿದ್ದುದರಿಂದ ಆಕೆಗೆ ಊಟ ಕೊಡಲು ಹೋಗುತ್ತಿದ್ದರು. ಆದರೆ ದಾರಿಯಲ್ಲಿ ಒಬ್ಬ ಸ್ಟೇಟ್ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟಿನ ಹೆಡ್ ಕಾನ್ಸ್‌ಟೆಬಲ್ ಡಿಪಾರ್ಟ್‌ಮೆಂಟಿನ ಬೈಸಿಕಲ್ಲಿನಲ್ಲಿ ಸವಾರಿ ಮಾಡುತ್ತಿರುವಾಗ ಸದರಿ ಹೆಂಗಸಿಗೆ ವಾಹನ ತಾಗಿಸಿದ ಕಾರಣ ಆಕೆಯ ತಲೆಗೆ ದೊಡ್ಡ ಪೆಟ್ಟಾಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿರುತ್ತಾಳೆ. ಹೆಚ್.ಸಿ.ಯು ಬೈಸಿಕಲ್ಲಿನಿಂದ ಆಕ್ಸಿಡೆಂಟ್ ಆದ ಕಾರಣ ಈಗ ಆ ಕೇಸ್‌ನ್ನು ಹಾಕದೇ ಆದನ್ನು ಮುಚ್ಚಿ ಹಾಕಲು ನೋಡುತ್ತಿರುವುದನ್ನು ಸರ್ಕಾರದವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತವಾದ ವಿಚಾರಣೆ ನಡೆಸಿ ಸತ್ತ ಕುಟುಂಬದವರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಕಾನೂನು ಪ್ರಕಾರವಾಗಿ ಮುಚ್ಚಿಡಬೇಕಾದ ಅವಶ್ಯಕತೆ ಇಲ್ಲ, ಪೋಲೀಸಿನವರೇ ಆಗಲೀ ಯಾರೇ ಆಗಲೀ ಆಕ್ಸಿಡೆಂಟ್‌ನಿಂದ ಮರಣ ಹೊಂದಿದುದರಿಂದ ಕಟ್ಟುನಿಟ್ಟಾಗಿ ಕಾನೂನಿನ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ತಕ್ಷಣವೇ ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇನೆ

(V) ಸ್ಟೇಟ್ ಲೈಬ್ರರಿಯನ್ ನೇಮಕಾತಿಯ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಪಾಯಿಂಟ್‌ಮೆಂಟ್ ಆಫ್ ಸ್ಟೇಟ್ ಲೈಬ್ರರಿಯನ್ ನೇಮಕ ಮಾಡುವಾಗ ಏನಾಗಿದೆ ಅಂದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಿಂದ ಬಂದವರನ್ನು ಸ್ಟೇಟ್ ಲೈಬ್ರರಿಯನ್ ಆಗಿ ಅಪಾಯಿಂಟ್ ಮಾಡಿದ್ದಾರೆ. ರೂಲ್ಸ್ ಪ್ರಕಾರ ಲೈಬ್ರರಿ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕ ಒಬ್ಬರಿಗೆ ಪ್ರಮೋಷನ್ ಕೊಡಬೇಕು. ಹಾಗೆ ಮಾಡದಿದ್ದರೆ ಕಾನೂನಿಗೆ ವಿರೋಧವಾಗುತ್ತದೆಂದು ಸೆಕ್ಷನ್ ೧೫ರ ಪ್ರಕಾರ ಗೊತ್ತಾಗುತ್ತದೆ. ಕಾರಣಾಂತರಗಳಿಂದ ಲೋಯರ್ ಗ್ರೇಡ್‌ನಲ್ಲಿರತಕ್ಕವರಿಗೆ ಅದರಲ್ಲೂ ಎರವಲು ಸೇವೆಯ ಮೇಲೆ ಬಂದವರಿಗೆ ಸ್ಟೇಟ್ ಲೈಬ್ರರಿಯನ್ ಆಗಿ ಅಪಾಯಿಂಟ್ ಮಾಡಿದ್ದಾರೆ. ಅದೇ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕವರಿಗೆ ಅನ್ಯಾಯ ಮಾಡಿದ್ದಾರೆ. ಫೆಬ್ರುವರಿ ೧೯೮೪ರಲ್ಲಿ ಮಾನ್ಯ ಶಿಕ್ಷಣ ಸಚಿವರು ಒಂದು ಮಾತು ಹೇಳಿದ್ದಾರೆ. ನಾವು ಬೇರೆ ಡಿಪಾರ್ಟ್‌ಮೆಂಟ್‌ನಿಂದ ಎರವಲು ಸೇವೆಯ ಮೇಲೆ ಬಂದವರಿಗೆ ಪ್ರಮೋಷನ್ ಕೊಡುವುದಿಲ್ಲ, ಅದೇ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕವರಿಗೆ ಪ್ರಮೋಷನ್ ಕೊಡುತ್ತೇವೆಂದು ಹೇಳಿದ್ದಾರೆ ಈಗ ಅದಕ್ಕೆ ತದ್ವಿರುದ್ಧವಾಗಿ ಅದೇ ಡಿಪಾರ್ಟ್‌ಮೆಂಟಿನ ಜನರನ್ನು ಬಿಟ್ಟು ಬೇರೆ ಎಜುಕೇಶನ್ ಡಿಪಾರ್ಟ್‌ಮೆಂಟ್‌ನಿಂದ ಬಂದಿರತಕ್ಕ

ವರಿಗೆ ಆದರೆಲ್ಲೂ ಲೋಯರ್ ಗ್ರೇಡ್‌ನಲ್ಲಿರತಕ್ಕವರಿಗೆ ಸ್ಟೇಟ್ ಲೈಬ್ರರಿಯನ್ ಆಗಿ ಅಪಾಯಿಂಟ್ ಮಾಡಿದ್ದಾರೆ. ಈ ರೀತಿ ಆಗುವುದಕ್ಕೆ ಕೆಲವು ಅಧಿಕಾರಿಗಳು ಕಾರಣವೆಂದು ತಮಗೆ ತಿಳಿದು ಬಂದಿದೆ. ಅಧಿಕಾರಿಗಳ ಪುಟ್ಟದಲ್ಲಿ ಈ ರೀತಿಯಾಗಿದೆಯೆಂದು ನಾವು ಕೇಳಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಹ ಆ ರೀತಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ತಾವು ಈ ಸಮಸ್ಯೆಯನ್ನ ಯಾವ ರೀತಿ ಬಗೆ ಹರಿಸುತ್ತೀರಿ?

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಯಾವುದೇ ಸರ್ಕಾರವಿರಲಿ ರೂಲ್ಸ್ ಪ್ರಕಾರ ಕೆಲಸ ಮಾಡಬೇಕು ಯಾರೇ ಆಗಲಿ ಕಾನೂನಿನ ಚೌಕಟ್ಟಿನೊಳಗಡೆ ಕೆಲಸ ಮಾಡಬೇಕು, ಮತ್ತು ಅದೇ ರೀತಿ ಮಾತನಾಡಬೇಕು. ಆದರೆ ಕೆಲವರು ಕಾನೂನುಬಾಹಿರ ಕೆಲಸ ಮಾಡುತ್ತಿದ್ದಾರೆ, ಮತ್ತು ಕೆಲವು ವ್ಯಕ್ತಿಗಳಿಗೆ ಅನುಕೂಲ ಮಾಡುತ್ತಿದ್ದಾರೆ ಯಾವುದೇ ಕೆಲಸ ಮಾಡುವಾಗ ಹೈಕೋರ್ಟ್ ಆರ್ಡರ್‌ಗೆ ಬೆಲೆ ಇರಬೇಕು. ಹೈಕೋರ್ಟ್ ಡೈರೆಕ್ಷನ್‌ಗೆ ವಿರುದ್ಧವಾಗಿ ಕೆಲಸ ಮಾಡುವುದಾದರೆ It is a contempt of the court committed by the Government. So, I want to stay this order. S. Thammaiah Petitioner v/s. State of Karnataka, and another, Respondents. Writ Petition No. 18803 of 1980 dated 5-4-1982.

> "In view of this, a writ in the nature of mandamus shall have to be issued to the State Government to consider the case of the petitioner for promotion. In case, the State Government wants to rely upon the adverse remarks made in the confidential reports of the petitioner for the period ending 31st March 1979, it still have to communicate those adverse remarks to the petitioner and afford him an opportunity to make a representation as required by Rule 9 of Karnataka Civil Services (Confidential Reports) Rules, 1976."

ಈ ಪ್ರಕಾರ ಹೈಕೋರ್ಟಿಗೆ ರೂಲಿಂಗ್ ಆಗಿದೆ. ನೀವು ತಪ್ಪು ಮಾಡಿದ್ದೀರಿ. ಇನ್ನು ಮುಂದೆ ತಪ್ಪು ಮಾಡಬಾರದು ಎಂದು ಆದೇಶ ಕೊಟ್ಟಿದ್ದಾರೆ. ಮುಂದೆ ಅಪಾಯಿಂಟ್‌ಮೆಂಟ್ ಮಾಡುವಾಗ ಮೈಸೂರು ಪಬ್ಲಿಕ್ ಲೈಬ್ರರೀಸ್ ಆಕ್ಟ್ ಸೆಕ್ಷನ್ ೧೫ರ ಪ್ರಕಾರ ಅಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಪ್ರಮೋಷನ್ ಕೊಡಿಯೆಂದು ಸ್ಪಷ್ಟವಾಗಿ ಹೈಕೋರ್ಟ್‌ನವರು ಆದೇಶವನ್ನು ಕೊಟ್ಟಿದ್ದಾರೆ. ಸ್ಟೇಟ್ ಲೈಬ್ರರಿಯನ್ ಪೋಸ್ಟ್ ೨೯-೧೧-೮೮ರವರೆಗೆ ಖಾಲಿಯಿದೆ. ಈಗ ತಪ್ಪಾಗಿದೆ, ಮುಂದೆ ಈ ತಪ್ಪು ಆಗಬಾರದೆಂದು ಹೈಕೋರ್ಟ್‌ನಿಂದ ಆದೇಶ ಬಂದಿದೆ. ಒಂದೂವರೆ ವರ್ಷಗಳ ಕಾಲ ಸರ್ಕಾರ ಯಾವುದೇ ಕ್ರಮವನ್ನು ಸ್ಟೇಟ್ ಲೈಬ್ರರಿಯನ್ ಪೋಸ್ಟ್ ಭರ್ತಿ ಮಾಡುವುದಕ್ಕೆ ತೆಗೆದು ಕೊಂಡಿಲ್ಲ. ಸೂರ್ಯಪ್ರಕಾಶ್ ಎಂಬವರು ಎರವಲು ಸೇವೆಯ ಮೇಲೆ ಬಂದರು. ಈಗ ಕಾನೂನಿಗೆ ಬೆಲೆ ಇಲ್ಲದಂತಾಗಿದೆ. ಹೈಕೋರ್ಟ್ ಡೈರೆಕ್ಷನ್‌ಗೆ ಬೆಲೆ ಇಲ್ಲದಂತೆ ಮಾಡುತ್ತಿದ್ದಾರೆ. ಈಗ ಹೊರಡಿಸಿರುವ ಆರ್ಡರನ್ನು ದಯಮಾಡಿ ಕ್ಯಾನ್ಸಲ್ ಮಾಡಿ ಅಲ್ಲಿಯೇ ಕೆಲಸ ಮಾಡತಕ್ಕವರಿಗೆ ನ್ಯಾಯವನ್ನು ದೊರಕಿಸಿ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—ಪುಸ್ತಕಭಂಡಾರದ ಅಧಿಕಾರಿಯನ್ನು ನೇಮಕ ಮಾಡುವಾಗ ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಕಾನಿಡೆನ್ಸಿಯಲ್ ರಿಪೋರ್ಟ್‌ಗಳನ್ನು ನೋಡುವಾಗ ಅವರಿಗೆ ಅರ್ಹತೆಯಿಲ್ಲ ಎನ್ನುವ ರೀತಿಯಲ್ಲಿ ರಿಪೋರ್ಟ್ ಇತ್ತು. ಹಿಂದೆ ಇದ್ದಂತಹ ಸ್ಟೇಟ್ ಲೈಬ್ರರಿಯನ್‌ಗಳಾದ ಬಗರಿಯವರು ಮತ್ತು ಪಾಟೀಲ್ ಅವರು ಅಲ್ಲಿರತಕ್ಕ ಅಧಿಕಾರಿಗಳ ವಿರುದ್ಧವಾಗಿ ರಿಪೋರ್ಟನ್ನು ಬರೆದಿದ್ದರು. ಅಲ್ಲಿರುವ ಅಧಿಕಾರಿಗಳು ಆ ಹುದ್ದೆಗೆ ಅರ್ಹರಲ್ಲವೆಂದು ನನಗೆ ಕಂಡು ಬಂತು. ಪ್ರೊಪೇಷನರಿ ರ‍್ಯಾಂಕ್‌ನವರು ಇದ್ದಾರೆ, ಅವರಿಗೆ ಪ್ರಮೋಷನ್ ಕೊಡೋಣವೆಂದರೆ ಕಾನೂನು ಪ್ರಕಾರ ೧೦ ವರ್ಷಗಳ ಕಾಲ ತುಂಬಿಲ್ಲ. ಕಾನೂನನ್ನು ತಿದ್ದುಪಡಿ ಮಾಡಬೇಕೆನ್ನುವ ಒಂದು ಸಲಹೆ ಕೂಡ ಬಂತು.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಹೈಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡಲಾಗಿದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ.

ಶ್ರೀ ಬಿ ರಾಚಯ್ಯ.—ನಾನು ಇರುವ ವಿಷಯವನ್ನು ಹೇಳುತ್ತಿದ್ದೇನೆ. ಕಾನೂನನ್ನು ತಿದ್ದುಪಡಿ ಮಾಡಬೇಕೆನ್ನುವ ಸಲಹೆ ಬಂದಾಗ ಒಬ್ಬರಿಗೋಸ್ಕರ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ನಾನು ವಾಪಸ್ಸು ಕಳುಹಿಸಿದ್ದೇನೆ. ಅಲ್ಲಿರತಕ್ಕ ಅಧಿಕಾರಿಗಳ ಚರಿತ್ರೆಯನ್ನು ಪರೀಕ್ಷೆ ಮಾಡುವಾಗ ಪ್ರತಿಯೊಬ್ಬರೂ ಕೂಡ ಆರ್ಹರಲ್ಲವೆನ್ನುವ ರೀತಿಯಲ್ಲಿ ಕಾಣುತ್ತಿದ್ದರು. ಒಬ್ಬರೂ ಕೂಡ ಸರಿಯಾಗಿ ಇರುವವರು ಕಾಣುತ್ತಿರಲಿಲ್ಲ. ಆ ದೃಷ್ಟಿಯಿಂದ ನಾನು ಏನು ಮಾಡಿದ್ದೇನೆಂದರೆ ಅಲ್ಲಿರತಕ್ಕ ಅಧಿಕಾರಿಗಳ ಕೆಳಗಡೆ ಇರತಕ್ಕವರನ್ನು ನೇಮಕ ಮಾಡುವಾರದೆನ್ನುವ ಕಾರಣದಿಂದ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲವೆಂದು ನಾನು ಕಡತದಲ್ಲಿ ಬರವಣಿಗೆಯಲ್ಲಿ ಬರೆದಿದ್ದೇನೆ ಎರಡು ವರ್ಷಗಳ ವರೆಗೆ ಎರವಲು ಸೇವೆಯ ಮೇಲೆ ತೆಗೆದುಕೊಳ್ಳಬಹುದು ಎನ್ನುವ ಸೂಚನೆ ಬಂತು. ಈಗ ಲೈಬ್ರರಿಯನ್ ಆಗಿ ಅಪಾಯಿಂಟ್ ಆಗಿರತಕ್ಕವರು ೧೭ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಅವರು ಎರಡು ವರ್ಷಗಳ ಕಾಲ ಇಲಿಯೆಂದು ಆರ್ಡರ್ ಮಾಡಿದ್ದೇನೆ. ಆದರೆ ಎರವಲು ಸೇವೆಯ ಮೇಲೆ ಕೆಲಸ ಮಾಡತಕ್ಕವರನ್ನು ಹೊರಗಡೆಯಿಂದ ಬಂದು ಕೆಲಸ ಮಾಡತಕ್ಕವರನ್ನು ಸ್ಪೇಟ್ ಲೈಬ್ರರಿಯನ್ ಆಗಿ ನೇಮಿಸಬಾರದೆಂದು ಹೈಕೋರ್ಟ್ ಆರ್ಡರ್ ಇದೆ ಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕಡೆ ಹೈಕೋರ್ಟ್ ಡೈರೆಕ್ಷನ್ ಇದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇನ್ನೊಮ್ಮೆ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ.

SRI S. BHEEMANNA KHANDRE.—Is it not intentional? It is a contempt of the Court.

MR. SPEAKER.—I shall not allow. If that is the case you go to the Court.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಪುನಃ ಪರಿಶೀಲನೆ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದಾರೆ. ಮಂತ್ರಿಗಳು ಈಗೇನೂ ಆರ್ಡರ್ ಇಸ್ಯು ಮಾಡಿದ್ದಾರೆ ಅದನ್ನು ವಿತ್‌ಡ್ರಾ ಮಾಡಬೇಕು. ಬೇಸಿಕ್ ಪಾಯಿಂಟ್ ಏನೆಂದರೆ ಈಗ ಕೆಲಸ ಮಾಡುತ್ತಿರುವವರು ಎಜುಕೇಶನ್ ಡಿಪಾರ್ಟ್‌ಮೆಂಟ್‌ನಿಂದ ಬಂದಿರುವವರು. ರೂಲ್ಸ್ ಪ್ರಕಾರ ಅದೇ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕವರು ಯಾರು ಅರ್ಹರು ಇರುತ್ತಾರೆ ಅವರಿಗೆ ಪ್ರಮೋಷನ್ ಕೊಡಬೇಕೆಂದು ಹೇಳುತ್ತಿದ್ದಾರೆ If both are disqualified then give it to the third man. If he is not entitled then find out a solution within this Act. But you should not bring an outside man.

MR. SPEAKER.—Let us not go into the details.

SRI MALLIKARJUNA M. KHARGE.—It is very important. ತಾವು ಪರಿಶೀಲನೆ ಮಾಡುವವರಿಗೆ ಈಗ ಇಸ್ಯು ಮಾಡಿರುವ ಆರ್ಡರನ್ನು ಕಡೆಹಿಡಿಯಬೇಕು. ಈಗ ತಾವು ಎರಡು ವರ್ಷದವರೆಗೆ ಆರ್ಡರ್ ಮಾಡಿದ್ದೀರಿ. ಅದನ್ನು ವಿತ್‌ಡ್ರಾ ಮಾಡಬೇಕು. ಅಧಿವೇಶನ ಮುಗಿದಮೇಲೆ ಮಂತ್ರಿಗಳ ಖಾತೆಗಳು ಬದಲಾವಣೆಯಾಗುತ್ತವೆಂದು ಹೇಳುತ್ತಿದ್ದಾರೆ.

MR. SPEAKER.—It is a general matter.

SRI S. BHEEMANNA KHANDRE.—We want correct answer.

ಶ್ರೀ ಬಿ. ರಾಚಯ್ಯ.—ಸೂರ್ಯಪ್ರಕಾಶ್ ಎಂಬುವರು ೧೭ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಏನೋ ಹೇಳುತ್ತಿದ್ದಾರೆ. ಅವರು ಒಂದು ನಿರ್ಣಯಕ್ಕೆ ಬರಬೇಕು.

MR. SPEAKER.—That is over. I cannot allow.

SRI B. RACHAIAH.—I will go through the records. ಪುನರ್ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

MR. SPEAKER.—Under rule 334 there is scope for clarification,

SRI MANIK RAO PATIL.—Sir, I rise to a point of order.....

MR. SPEAKER.—There are 30 more matters under rule 334. How I should dispose of if we spend so much time in one matter.

SRI MANIK RAO PATIL.—Sir when the Court has given a direction they have no authority to give promotion. According to the Civil Service Rules any adverse remarks on a Government servant has to be communicated to him and his explanation if any has got to be examined and then Government can take a decision. Now, I would like to know whether the Hon'ble Minister has made any effort to find out whether the Officer was informed of the adverse remarks and opportunity given to him to explain his position on the adverse remarks passed.

SRI S. BHIMANNA KHANDRE.—Sir, there is a court order.....

(INTERRUPTION)

SRI B. RACHAIAH.—When I was the Minister for Revenue I have said the office should communite the adverse remarks passed on a person so that he may be given sufficient opportunity to explain about the removal of adverse remarks passed against him. I know the rules. I have followed the procedure here also.

(INTERRUPTION)

SRI S. BHIMANNA KHANDRE.—It would amount of contempt of court.....

MR. SPEAKER.—It will not go to the records.....

SRI S. BHIMANNA KHANDRE.—Let the Government make a statement... ..

MR. SPEAKER.—You cannot force the Minister to reply as you like. The scope under rule 334 is very limited.

(INTERRUPTION)

SRI S. BHIMANNA KHANDRE.—I have sent a notice under rule 334.

MR. SPEAKER.—If this is the attitude under rule 334 I think we have to dispense with this and I appeal to the Leaders of all the Parties to review this. I cannot force the Government to give reply to all the questions.....

SRI S. BHIMANNA KHANDRE.—It is clear that the Government is going against the order of the court. It amounts to contempt of court.....

MR. SPEAKER.—I don't allow further discussion. I call upon Sri Fernandes.....

ಸೂರಜ್ ಡೈಮಂಡ್ ಇಂಡಸ್ಟ್ರೀಸ್ ಬಗ್ಗೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೇ ಕಳೆದ ಎರಡು ತಿಂಗಳುಗಳ ಹಿಂದೆ ಇಂದಿರಾನಗರದ ಸೂರಜ್ ಡೈಮಂಡ್ ಇಂಡಸ್ಟ್ರೀಸ್ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆವು. ಈ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ನಾವು ತಂದಿದ್ದೆವು. ಆದರೆ ಕೆಲವು ದಿವಸಗಳು ಹಿಂದೆ ಪೋಲೀಸ್‌ನವರ ರಕ್ಷಣೆಯನ್ನು ಪಡೆದು ಆ ಕಂಪನಿಯ ಮಾಲೀಕರು ಅಲ್ಲಿರತಕ್ಕಂಥ ಮಿಷನರಿಗಳನ್ನು ಬೇರೆ ಕಡೆ ರಾತ್ರಿ ಎರಡು ಗಂಟೆಯಲ್ಲಿ ಸಾಗಿಸಿದ್ದಾರೆ. ಅಲ್ಲಿರತಕ್ಕಂಥ ಫ್ಯಾಕ್ಟರಿಯ ಯೂನಿಯನ್‌ರವರನ್ನು ಸಹ ಬಂದಿಸಿ ಆ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ಪೋಲೀಸಿನವರು ಮಾಲೀಕರೊಂದಿಗೆ ಶಾಮೀಲಾಗಿ ಈ ಒಂದು ನೀಚ ಕೃತ್ಯವನ್ನು ಮಾಡಿದ್ದಾರೆ. ಇದರಿಂದ ಸಾವಿರಾರು ಜನ ಕಾರ್ಮಿಕರಿಗೆ ತೊಂದರೆಯಾಗಿದೆ. ಪೋಲೀಸಿನವರು ಒಂದು ರೀತಿಯಲ್ಲಿ ಸರ್ಕಾರವನ್ನು ಚೀಟ್ ಮಾಡಿದ್ದಾರೆ. ಆತ ತಮ್ಮ ಕೈಗಾರಿಕೆಯನ್ನು ರಿಜಿಸ್ಟರ್ಡ್ ಮಾಡದೇ ಕೈಗಾರಿಕೆಯನ್ನು ನಡೆಸುತ್ತಿದ್ದ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡು ಆ ಕೈಗಾರಿಕೆಯ ಮಾಲೀಕರೊಂದಿಗೆ ಶಾಮೀಲಾಗಿರತಕ್ಕಂಥ ಪೋಲೀಸಿನವರ ಮೇಲೆ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ನನ್ನ ಹತ್ತಿರ ಕೂಡ ಕೆಲವು ಕಾರ್ಮಿಕರು ಬಂದಿದ್ದರು. ಅವರು ನನಗೆ ಕೂಡ ಮನವಿಯನ್ನು ಸಲ್ಲಿಸಿದ್ದಾರೆ. ಏಕೆಂದರೆ ನಾನು ಸಾರ್ವಜನಿಕ ಕುಂದು ಕೊರತೆಗಳ ಖಾತೆಯನ್ನು ಪಹಿಸಿಕೊಂಡಿರುವ ಮಂತ್ರಿಯಾಗಿರುವುದರಿಂದ ರಾತ್ರಿ ವೇಳೆಯಲ್ಲಿ ಮಿಷನರಿಗಳನ್ನು ಬೇರೆ ಕಡೆ ಸಾಗಿಸಿರುವುದರಿಂದ ಮತ್ತು ಇದಕ್ಕೆ ಪೋಲೀಸಿನವರು ಶಾಮೀಲಾಗಿರುವುದರಿಂದ ಅವರ ಮೇಲೆ ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಏಂಡಿತವಾಗಿ ಹಿಂಜರಿಯುವುದಿಲ್ಲ.

ಶ್ರೀ ಮೈಕೇಲ್ ಬಿ ಫರ್ನಾಂಡೀಸ್.—ಸ್ವಾಮಿ ಅದು ರಾತ್ರಿ ಎರಡು ಗಂಟೆಯ ಸಮಯದಲ್ಲಿ ಮಿಷನರಿಯನ್ನು ಸಾಗಿಸುವ ಅವಶ್ಯಕತೆಯಾದರೂ ಏನಿತ್ತು ?

ಅಧ್ಯಕ್ಷರು.—ಮಾನ್ಯ ಚನ್ನಬಸವನಗೌಡರು... ...

VII) ಧಾರವಾಡ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನಿಟ್ಟು ಸರದಿ ಸತ್ಯಾಗ್ರಹವನ್ನು ಮಾಡುತ್ತಿರುವ ಬಗ್ಗೆ.

ಶ್ರೀ ಎಸ್. ಚನ್ನಬಸವನ ಗೌಡ.—ಮಾನ್ಯ ಅಧ್ಯಕ್ಷರೇ ಧಾರವಾಡ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ದಿನಾಂಕ ೨೬-೩-೮೪ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆದರೆ ಅವರ ಯೋಗ ಕ್ಷೇಮವನ್ನು ವಿಚಾರಣೆ ಮಾಡುವುದಕ್ಕೆ ನಮ್ಮ ಸರ್ಕಾರದಿಂದ ಯಾರೂ ಕೂಡ ಹೋಗಿಲ್ಲವೆಂದು ನನಗೆ ತಿಳಿದು ಬಂತು. ಅಲ್ಲಿರತಕ್ಕಂಥ ಅಧಿಕಾರಿಗಳು ಕೂಡ ಹೋಗಿ ನೋಡಿಲ್ಲ. ಅವರು ತಮ್ಮ ಬೇಡಿಕೆಗಳಲ್ಲಿ ಮೂರು ಬೇಡಿಕೆ ಎಂದರೆ ಧಾರವಾಡದಲ್ಲಿ ಒಂದು ಕೃಷಿ ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ. ೧೯೭೩ರಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರು ಕೃಷಿ ಮಂತ್ರಿಗಳಾಗಿದ್ದಾಗ ಒಂದು ಖಾಸಗೀ ನಿರ್ಣಯವನ್ನು ಮಂಡಿಸಿದ್ದೆ. ಆಗ ನಿರ್ಣಯವನ್ನು ಅವರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟು ಅಲ್ಲಿ ಚರ್ಚೆಯಾಗಿ ಪಾಸು ಆಗಿ ಬಂದಿದೆ. ಅಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಅವಶ್ಯಕತೆ ಬಹಳ ಇದೆ ಎಂಬುದೂ ಆಗಿನ